## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ. 690/2024**

**ಚಾಸಾಃ 6/ಫ್ರಾಸಾಃ 5**

**ದಿನಾಂಕಃ 07-07-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ದೇವೇಂದ್ರಪ್ಪ ಹಾಲವರ |
| ತಂದೆ/ಗಂಡನ ಹೆಸರು | ಕಲ್ಲಪ್ಪ |
| ವಯಸ್ಸು | 58 ವರ್ಷ |
| ಉದ್ಯೋಗ | ಎ ಎಸ ಐ ರೋಣ ಪೋಲಿಸ ಠಾಣೆ |
| ವಾಸ | ರೋಣ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನಾನು ಜೂನ 2020 ರಿಂದ ಜೂನ 2026 ರವರೆಗೆ ನರಗುಂದ ಪೋಲಿಸರ ಠಾಣೆಯಲ್ಲಿ ಎ ಎಸ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ: 20-11-2024 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 6.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಸರಕಾರದ ಪರವಾಗಿ ನಿಪಿಃ2 ರಂತೆ ದೂರನ್ನು ಸಲ್ಲಿಸಿದ್ದು, ಸದರಿ ದೂರನ್ನು ಪಡೆದು, ಠಾಣಾ ಮೊಕದ್ದಮೆ 174/2024 ರಡಿಯಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವ.ಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ಪ್ರ.ವ.ವ.ಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ2(ಬಿ), 5(ಎ) ಎಂದು ಗುರುತಿಸಲಾಯಿತು. ಸಂಜೆ 6.30 ಗಂಟೆಗೆ ಚಾಸಾ-4, 5 ರವರನ್ನು ಕಚೇರಿಗೆ ಕರೆದು ಪ್ರಕರಣದ ಮಾಹಿತಿ ತಿಳಿಸಿ ದಾಳಿಗೆ ಹೋಗುವ ಕುರಿತು ತಿಳಿಸಿರುತ್ತೇನೆ. ಕೂಡಲೇ ಚಾಸಾ-1, 4, 5 ರವರನ್ನು ಕರೆದುಕೊಂಡು ಠಾಣೆಯಿಂದ ಪ್ರಿಂಟರ ಮತ್ತು ಲ್ಯಾಪಟಾಪ ತೆಗೆದುಕೊಂಡು ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟಿರುತ್ತೇವೆ. ಠಾಣೆಯ ಎದುರಿಗೆ ವಡ್ಡರ ಓಣಿ ಕ್ರಾಸನಲ್ಲಿ ನಿಂತಿದ್ದ ಚಾಸಾ-2, 3 ರವರನ್ನು ಕರೆದು, ಪರಿಚಯ ಮಾಡಿಕೊಂಡು, ಪ್ರಕರಣದ ಮಾಹಿತಿ ತಿಳಿಸಿ, ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು  ಅದಕ್ಕೆ ಅವರು ಒಪ್ಪಿ ಕೊಂಡಿರುತ್ತಾರೆ. ಕಾರಣ ಸದರಿ ಪಂಚರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಸಂಜೆ 7.00 ಗಂಟೆಗೆ ಶಿರೋಳ ಗ್ರಾಮಕ್ಕೆ ತಲುಪಿ ಸರಕಾರಿ ಆಸ್ಪತ್ರೆಯಿಂದ ಸ್ವಲ್ಪ ಅಂತರದಲ್ಲಿ ಗಿಡದ ಮರೆಗೆ ವಾಹನ ನಿಲ್ಲಿಸಿ ನಾವು ನಿಂತಿಕೊಂಡು ವೀಕ್ಷಣೆ ಮಾಡಿರುತ್ತೇವೆ.  ಆ ಸಮಯದಲ್ಲಿ ಆಸ್ಪತ್ರೆಯ ಮುಂದೆ ಇರುವ ರಸ್ತೆಯ ಪಕ್ಕದಲ್ಲಿ ಒಬ್ಬ ವ್ಯಕ್ತಿಯು  ಸಾರ್ವಜನಿಕರನ್ನು ಕರೆದು ಅದೃಷ್ಟ ಸಂಖ್ಯೆಗಳ ಮೇಲೆ ಹಣ ಕಟ್ಟಿರಿ, ಅದೃಷ್ಟ ಸಂಖ್ಯೆ ಬಂದರೆ 1

ರೂ. ಗೆ 80 ರೂ. ನೀಡುತ್ತೇನೆ ಎಂದು ಜನರಿಂದ ಹಣ ಪಡೆದು ಓಸಿ ಜೂಜಾಟ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಸಂಜೆ 7.10 ಗಂಟೆಯ ಸಮಯದಲ್ಲಿ ನಾವು ಪಂಚರ ಸಮಕ್ಷಮ ದಾಳಿ ಮಾಡಿದ್ದು, ಆ ಸಮಯದಲ್ಲಿ ಸದರಿ ವ್ಯಕ್ತಿಯನ್ನು ಚಾಸಾ-4 ರವರು ಹಿಡಿದಿರುತ್ತಾರೆ. ನಂತರ ನಾನು ಸದರಿ ವ್ಯಕ್ತಿಯನ್ನು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಇಂತಿಯಾಜ ತಂದೆ ರಾಜೇಸಾಬ ಚಳ್ಳಮರದ ಎಂದು ತಿಳಿಸಿದ್ದು, ಮುಂದುವರೆದು ಸದರಿ ಓಸಿ ಚೀಟಿ ಮತ್ತು ಹಣವನ್ನು ಹಸನಸಾಬ ಯಾದವಾಡ, ಸಾಃರಾಮದುರ್ಗರವರಿಗೆ ನೀಡುತ್ತೇನೆ ಎಂದು ತಿಳಿಸಿರುತ್ತಾನೆ. ನಂತರ ನಾನು ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಅಂಗಶೋಧನೆ ಮಾಡಿದಾಗ ಆತನ ಪ್ಯಾಂಟನ ಬಲ ಜೇಬಿನಲ್ಲಿ ರೂ.320 ಹಣ, ಅಂಗಿ ಜೇಬಿನಲ್ಲಿ ಒಂದು ಪೆನ್ ಹಾಗೂ ಓಸಿ ನಂಬರ ಬರೆದ ಚೀಟಿ ಸಿಕ್ಕಿರುತ್ತವೆ. ಸದರಿ ವಸ್ತುಗಳ ಕುರಿತು ಆತನನ್ನು ನಾನು ವಿಚಾರಣೆ ಮಾಡಿದಾಗ ಆತ ಸದರಿ ಓಸಿ ಹಣವನ್ನು ಹಸನ್ ಎಂಬ ವ್ಯಕ್ತಿಗೆ ನೀಡುತ್ತೇನೆ ಎಂದು ತಿಳಿಸಿರುತ್ತಾನೆ. ಸದರಿ ಚಾಸಾ-2, 3 ರವರ ಸಮಕ್ಷಮ ನಾನು ಅದೇ ಸ್ಥಳದಲ್ಲಿ ಸಂಜೆ 7.10 ರಿಂದ 7.45 ಗಂಟೆಯವರೆಗೆ ನಿಪಿ-1 ರಂತೆ ಸ್ಥಳ ಪಂಚನಾಮೆ ಜರುಗಿಸಿ, ಸದರಿ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿಯೇ ಪ್ರಿಂಟರ ಮೂಲಕ ಪಂಚನಾಮೆಯನ್ನು ಪ್ರಿಂಟ ತೆಗೆದು ಪಂಚರ ಮತ್ತು ಚಾಸಾ-4 ರವರ ಸಹಿ ಪಡೆದಿರುತ್ತೇನೆ. ನಂತರ ಬಂಧಿಸಿದ ವ್ಯಕ್ತಿ, ದಾಖಲೆಗಳು ಮತ್ತು ಮು. ಮಾ.ಗಳೊಂದಿಗೆ ನರಗುಂದ ಠಾಣೆಗೆ ಬಂದಿರುತ್ತೇವೆ. ದಾಳಿಯ ಸಮಯದಲ್ಲಿ ದಾಳಿಯ ಎಲ್ಲ ಕ್ರಿಯೆಗಳನ್ನು ಚಿತ್ರೀಕರಣ ಮಾಡುವಂತೆ ಚಾಸಾ-1 ರವರಿಗೆ ತಿಳಿಸಿದು ಆ ಪ್ರಕಾರ ಚಾಸಾ-1 ರವರು ಫೋಟೋ ಮತ್ತು ಚಿತ್ರೀಕರಣ ಮಾಡಿರುತ್ತಾರೆ. ಅದೇ ದಿನ ಚಾಸಾ-1 ರವರ ಮರುಹೇಳಿಕೆ ಮತ್ತು ಚಾಸಾ-4, 5 ರವ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ತನಿಖೆಯ ಸಮಯದಲ್ಲಿ ಹಾಜರಾಗುವಂತೆ ಆರೋಪಿತನಿಗೆ ನೋಟಿಸ ನೀಡಿ ಬಿಡುಗಡೆ ಮಾಡಿರುತ್ತೇನೆ. ಆ ಸಮಯದಲ್ಲಿ ಆರೋಪಿತನ ಸ್ವ-ಖುಷಿ ಹೇಳಿಕೆ ಪಡೆದಿರುತ್ತೇನೆ. ನೋಟಿಸನ್ನು ನಿಪಿ-6 ಎಂದು, ಸ್ವ-ಖುಷಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಅದೇ ದಿನ ಚಿತ್ರೀಕರಿಸಿದ ವಿಡಿಯೋಗಳನ್ನು ಠಾಣಾ ಕಂಪ್ಯೂಟರ ಮೂಲಕ ಡಿವಿಡಿಗೆ ವರ್ಗಾವಣೆ ಮಾಡಿದ ಬಗ್ಗೆ ಚಾಸಾ-1 ರವರಿಂದ ನಿಪಿ-3 ರಂತೆ ಪ್ರಮಾಣ ಪತ್ರ ಮತ್ತು ನಿಪಿ-4 ಡಿವಿಡಿ ಪಡೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ದಿಃ 21-11-2024 ರಂದು ತನಿಖೆಗೆ ಹಾಜರಾಗುವಂತೆ 2 ನೇ ಆರೋಪಿತನಿಗೆ ನೋಟಿಸ ನೀಡಿರುತ್ತೇನೆ. ಸದರಿ ನೋಟಿಸನ್ನು ನಿಪಿ-8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಆ ಪ್ರಕಾರ ದಿಃ 24-11-2024 ರಂದು 2 ನೇ ಆರೋಪಿತನು ವಿಚಾರಣೆಗೆ ಹಾಜರಾಗಿದ್ದು ಆ ಸಮಯದಲ್ಲಿ ಆತನ ಸ್ವ-ಖುಷಿ ಹೇಳಿಕೆ ಪಡೆದಿರುತ್ತೇನೆ. ಸ್ವ-ಖುಷಿ ಹೇಳಿಕೆಯನ್ನು ನಿಪಿ-9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 9(ಎ) ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಳಿಸಿ ದಿಃ24-11-2024 ರಂದು ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. ದಾಳಿಯ ಸಮಯದಲ್ಲಿ ಬಂಧಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿತನಾಗಿದ್ದಾನೆ. 1 ನೇ ಆರೋಪಿತನಿಂದ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಹಣ, ಪೆನ್ ಮತ್ತು ಚೀಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು. ಮಾ. 1 ರಿಂದ 3 ಎಂದು ಗುರುತಿಸಲಾಗಿದೆ. ಠಾಣೆಯಲ್ಲಿ ಸ್ವ-ಖುಷಿ ಹೇಳಿಕೆ ನೀಡಿದ 2 ನೇ ಆರೋಪಿತ ಸಹ ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ಆಗಿದ್ದಾನೆ.

**ಸಿಸಿ ನಂ. 690/2024**
**ಚಾಸಾಃ 6/ಪ್ರಾಸಾಃ 5**
**ದಿನಾಂಕಃ 07-07-2026**

**ಪಾಟೀ ಸವಾಲುಃ ಶ್ರೀ ಕೆ ಎಸ ಡಿ ಆರೋಪಿತರ ಪರ ವಕೀಲರಿಂದಃ**

ಚಾಸಾ-1, 4, 5 ನನ್ನ ಕೆಳ ಹಂತದ ಅಧಿಕಾರಿಗಳು ಎಂದರೆ ಸರಿ. ಸದರಿಯವರು ನಾನು ಹೇಳಿದಂತೆ ನಡೆದುಕೊಳ್ಳುತ್ತಾರೆ ಎಂದರೆ ಸರಿ. ಹೊಸ ಕಾನೂನಿನ ಪ್ರಕಾರ ಈ ಪ್ರಕರಣವನ್ನು ವಿಚಾರಣೆ ಮಾಡುವ ಅಧಿಕಾರ ಪಿ ಎಸ ಐ ಗಿಂತ ಮೇಲಿನ ದರ್ಜೆಯ ಅಧಿಕಾರಿಗಳಿಗೆ ಮಾತ್ರ ಇದೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ20-11-2024 ರಂದು ಸಂಜೆ 6.00 ಗಂಟೆಗೆ ಚಾಸಾ-1 ರವರು ಪ್ರಕರಣದ ಬಗ್ಗೆ ದೂರು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರಗುಂದದಿಂದ ಶಿರೋಳ 22-25 km ಅಂತರದಲ್ಲಿದೆ. ಸದರಿ ಸ್ಥಳಕ್ಕೆ ಕೊಣ್ಣೂರು ಮಾರ್ಗವಾಗಿ ಹೋಗುತ್ತೇವೆ. ಸಾಮಾನ್ಯವಾಗಿ ಕೊಣ್ಣೂರು - ನರಗುಂದ ರಸ್ತೆಯು ಹೆದ್ದಾರಿ ಆಗಿರುವ ಕಾರಣ ಯಾವಾಗಲೂ ಹೆಚ್ಚಿನ ವಾಹನ ಸಂಚಾರ ಇರುತ್ತದೆ ಎಂದರೆ ಸರಿಯಲ್ಲ. ಮಾರ್ಗ ಮಧ್ಯೆ ಪಂಚರನ್ನು ನೇಮಿಸಿಕೊಂಡು ಶಿರೋಳ ಗ್ರಾಮಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಟ್ಟಣದ ವಡ್ಡರ ಓಣಿ ಕ್ರಾಸನಲ್ಲಿ ಪಂಚರನ್ನು ನೇಮಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರಗುಂದದಿಂದ ಶಿರೋಳ ಗ್ರಾಮಕ್ಕೆ ಅರ್ಧ ಗಂಟೆಯಲ್ಲಿ ಹೋಗಬಹುದು. ಹೆಚ್ಚಿನ ವಾಹನ ಸಂಚಾರ ಇರುವುದರಿಂದ ಕನಿಷ್ಟ 1 ಗಂಟೆ ಪ್ರಯಾಣ ಬೇಕಾಗುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಕೊಣ್ಣೂರು-ಶಿರೋಳ ರಸ್ತೆಯು ಚಿಕ್ಕ ರಸ್ತೆ ಆಗಿರುವ ಕಾರಣ ಹೆಚ್ಚಿನ ಸಮಯ ಬೇಕಾಗುತ್ತದೆ ಎಂದರೆ ಸರಿಯಲ್ಲ. ಸದರಿ ಅಂತರವನ್ನು ಅರ್ಧ ಗಂಟೆಯಲ್ಲಿ ಪ್ರಯಾಣಿಸಬಹುದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 7.00 ಗಂಟೆಗೆ ಶಿರೋಳ ಗ್ರಾಮಕ್ಕೆ ಹೋಗಿ ಮರದ ಮರೆಯಲ್ಲಿ ನಿಂತು ವೀಕ್ಷಣೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿತನು ಆಸ್ಪತ್ರೆಯ ಎದುರಿಗೆ ನಿಂತು ಓಸಿ ಆಡುತ್ತಿರುವುದು ಕಂಡು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ದಾಳಿ ಮಾಡಿ 1 ನೇ ಆರೋಪಿತನನ್ನು ಹಿಡಿದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿತನು ತನ್ನ ತಪ್ಪನ್ನು ಹಾಗೂ 2 ನೇ ಆರೋತಪಿನ ಬಗ್ಗೆ ತಿಳಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನಾವು 1 ನೇ ಆರೋಪಿತನ ವಿರುದ್ಧ ಯಾವುದೇ ದಾಳಿ ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಹೇಳಿಕೆ ಪಡೆಯಲು ಪ್ರಯತ್ನಿಸಿಲ್ಲ. ಸಾಮಾನ್ಯವಾಗಿ ಸಂಜೆ 7.00 ಗಂಟೆಗೆ ಕತ್ತಲು ಆಗಿರುತ್ತದೆ ಎಂದರೆ ಸರಿ. ಕಾರಣ ದೂರದ ವ್ಯಕ್ತಿ ಸರಿಯಾಗಿ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿತನನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿತನ ಸ್ವ-ಖುಷಿ ಹೇಳಿಕೆ ಪಡೆದು ನೋಟಿಸ ನೀಡಿ ಬಿಡುಗಡೆ

ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಆರೋಪಿತನಿಗೆ ನೋಟಿಸ ನೀಡಿ ಆತನಿಂದ ಸ್ವ-ಖುಷಿ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಹಾಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಅಪರಾಧವಾಗದೆ ಇದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕಛೇರಿಯ ಅಂಕಿ ಅಂಶಗಳಿಗಾಗಿ ಚಾಸಾ-1 ರವರು ದಾಖಲಿಸಿರುವ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.ಗಳು ಎಲ್ಲ ಸ್ಥಳಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ಸದರಿ ಮು.ಮಾ.ಗಳನ್ನು ದಾಳಿಯ ಸಮಯದಲ್ಲಿ 1 ನೇ ಆರೋಪಿತನಿಂದ ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ

# ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ. 690/2024**

**ಚಾಸಾಃ 4/ಫ್ರಾಸಾಃ 4**

**ದಿನಾಂಕಃ 07-07-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ ಹಿರೇಮನಿ |
| ತಂದೆ/ಗಂಡನ ಹೆಸರು | ಹಣಮಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ಪೇದೆ ನಂಬರ 402 ನರಗುಂದ ಪೋಲಿಸ ಠಾಣೆ |
| ವಾಸ | ನರಗುಂದ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನಾನು ಜೂನ 2022 ರಿಂದ ಇಲ್ಲಿಯವರೆಗೆ ನರಗುಂದ ಪೋಲಿಸರ ಠಾಣೆಯಲ್ಲಿ ಪೇದೆ ನಂಬರ 402 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ: 20-11-2024 ರಂದು ಸಂಜೆ 6.00 ಗಂಟೆಯ ಸಮಯದಲ್ಲಿ ನಾನು ನರಗುಂದ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-6 ರವರು ಚಾಸಾ-1, 5 ಮತ್ತು ನನ್ನನ್ನು ತಮ್ಮ ಕಚೇರಿಗೆ ಕರೆದು ಚಾಸಾ-1 ರವರು ದಾಖಲಿಸಿರುವ ದೂರಿನ ಬಗ್ಗೆ ಮಾಹಿತಿ ನೀಡಿ, ಸದರಿ ದೂರಿನ ಕುರಿತು ದಾಳಿಗೆ ಹೋಗುವ ಬಗ್ಗೆ ತಿಳಿಸಿರುತ್ತಾರೆ. ಆ ಪ್ರಕಾರ ಚಾಸಾ-1, 5, 6 ರವರೊಂದಿಗೆ ಸಂಜೆ 6.30 ಗಂಟೆಗೆ ಠಾಣೆಯಿಂದ ಲ್ಯಾಪಟಾಪ, ಪ್ರಿಂಟರ ತೆಗೆದುಕೊಂಡು ಇಲಾಖಾ ವಾಹನದಲ್ಲಿ ಹೊರಟಿದ್ದು ಮಾರ್ಗ ಮಧ್ಯೆ ಪಟ್ಟಣದ ವಡ್ಡರ ಓಣಿ ಕ್ರಾಸನಲ್ಲಿ ನಿಂತಿದ್ದ ಚಾಸಾ-2, 3 ರವರನ್ನು ಚಾಸಾ-6 ರವರು ಪರಿಚಯ ಮಾಡಿಕೊಂಡು, ಪ್ರಕರಣದ ಮಾಹಿತಿ ತಿಳಿಸಿ, ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿರುತ್ತಾರೆ. ಅದಕ್ಕೆ ಅವರು ಒಪ್ಪಿಕೊಂಡಿದ್ದರಿಂದ ಅವರನ್ನೂ ಸಹ ನಮ್ಮ ಜೊತೆ ಇಲಾಖಾ ವಾಹನದಲ್ಲಿ ಕರೆದುಕೊಂಡು ಕೊಣ್ಣೂರು ಮಾರ್ಗವಾಗಿ ಶಿರೋಳ ಸರಕಾರಿ ಆಸ್ಪತ್ರೆಯ ಹತ್ತಿರ ಸಂಜೆ 7.00 ಗಂಟೆಗೆ ತಲುಪಿರುತ್ತೇವೆ. ಆಸ್ಪತ್ರೆಯಿಂದ ಸ್ವಲ್ಪ ಅಂತರದಲ್ಲಿ ಕಂಪೌಂಡ ಗೋಡೆಯ ಮರೆಯಲ್ಲಿ ವಾಹನ ನಿಲ್ಲಿಸಿ, ನಾವು ಅಲ್ಲೆ ನಿಂತುಕೊಂಡು ವಿಕ್ಷಣೆ ಮಾಡಿರುತ್ತೇವೆ. ಆ ಸಮಯದಲ್ಲಿ ಆಸ್ಪತ್ರೆಯ ಮುಂದೆ ಇರುವ ರಸ್ತೆಯ ಪಕ್ಕದಲ್ಲಿ ಒಬ್ಬ ವ್ಯಕ್ತಿಯು ಸಾರ್ವಜನಿಕರನ್ನು ಕರೆದು ಅದೃಷ್ಟ ಸಂಖ್ಯೆಗಳ ಮೇಲೆ ಹಣ ಕಟ್ಟಿರಿ, ಅದೃಷ್ಟ ಸಂಖ್ಯೆ ಬಂದರೆ 1 ರೂ. ಗೆ 80 ರೂ. ನೀಡುತ್ತೇನೆ ಎಂದು ಜನರಿಂದ ಹಣ ಪಡೆದು ಓಸಿ ಜೂಜಾಟ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಸಂಜೆ 7.10 ಗಂಟೆಯ ಸಮಯದಲ್ಲಿ ಚಾಸಾ-6 ರವರೊಂದಿಗೆ ನಾವು ಪಂಚರ ಸಮಕ್ಷಮ ದಾಳಿ ಮಾಡಿದ್ದು, ಆ ಸಮಯದಲ್ಲಿ

ಸದರಿ ವ್ಯಕ್ತಿಯನ್ನು ಚಾಸಾ-6 ರವರು ಹಿಡಿದಿರುತ್ತಾರೆ. ಆತನೊಂದಿಗೆ ನಿಂತಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ನಂತರ ಚಾಸಾ-6 ರವರು ಸದರಿ ವ್ಯಕ್ತಿಯನ್ನು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಇಂತಿಯಾಜ ತಂದೆ ರಾಜೇಸಾಬ ಚಳ್ಳಮರದ ಎಂದು ತಿಳಿಸಿರುತ್ತಾನೆ. ಚಾಸಾ-6 ರವರು ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಅಂಗಶೋಧನೆ ಮಾಡಿದಾಗ ಆತನ ಪ್ಯಾಂಟನ ಬಲ ಜೇಬಿನಲ್ಲಿ ರೂ.320 ಹಣ, ಅಂಗಿ ಜೇಬಿನಲ್ಲಿ ಒಂದು ಪೆನ್ ಹಾಗೂ ಓಸಿ ನಂಬರ ಬರೆದ ಚೀಟಿ ಸಿಕ್ಕಿರುತ್ತವೆ. ಚಾಸಾ-6 ರವರು ಸದರಿ ವಸ್ತುಗಳ ಕುರಿತು ಆತನನ್ನು ವಿಚಾರಣೆ ಮಾಡಿದಾಗ ಆತ ಸದರಿ ಓಸಿ ಹಣವನ್ನು ಹಸನ್ , ಸಾಃ ರಾಮದುರ್ಗ ಎಂಬ ವ್ಯಕ್ತಿಗೆ ನೀಡುತ್ತೇನೆ ಎಂದು ತಿಳಿಸಿರುತ್ತಾನೆ. ಸದರಿ ಚಾಸಾ-2, 3 ರವರ ಸಮಕ್ಷಮ ಚಾಸಾ-6 ರವರು ಅದೇ ಸ್ಥಳದಲ್ಲಿ ಸಂಜೆ 7.10 ರಿಂದ 7.45 ಗಂಟೆಯವರೆಗೆ ನಿಪಿ-1 ರಂತೆ ಸ್ಥಳ ಪಂಚನಾಮೆ ಜರುಗಿಸಿ, ಸದರಿ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ನಾನೇ ಬೆರಳಚ್ಚು ಮಾಡಿರುತ್ತೇನೆ. ಆ ಕುರಿತು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಂತರ ಬಂಧಿಸಿದ ವ್ಯಕ್ತಿ, ದಾಖಲೆಗಳು ಮತ್ತು ಮು. ಮಾ.ಗಳೊಂದಿಗೆ ನರಗುಂದ ಠಾಣೆಗೆ ಬಂದಿರುತ್ತೇವೆ. ದಾಳಿಯ ಸಮಯದಲ್ಲಿ ಬಂಧಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿತನಾಗಿದ್ದಾನೆ. 1 ನೇ ಆರೋಪಿತನಿಂದ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಹಣ, ಪೆನ್ ಮತ್ತು ಚೀಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು. ಮಾ. 1 ರಿಂದ 3 ಎಂದು ಗುರುತಿಸಲಾಗಿದೆ. ಈ ಎಲ್ಲ ವಿಷಯಗಳ ಕುರಿತು ಚಾಸಾ-6 ರವರ ಮುಂದೆ ಹೇಳಿಕೆ ನೀಡಿರುತ್ತೇನೆ .

**ಪಾಟೀ ಸವಾಲುಃ ಶ್ರೀ ಕೆ ಎಸ ಡಿ ಆರೋಪಿತರ ಪರ ವಕೀಲರಿಂದಃ**

ಚಾಸಾ-6 ನನ್ನ ಮೇಲಾಧಿಕಾರಿ ಎಂದರೆ ಸರಿ. ಸದರಿಯವರು ಹೇಳಿದಂತೆ ನಡೆದುಕೊಳ್ಳುತ್ತೇವೆ ಎಂದರೆ ಸರಿ. ದಿಃ 20-011-2024 ರಂದು ಸಂಜೆ 6.30 ಗಂಟೆಗೆ ಚಾಸಾ-6 ರವರು ನಮ್ಮನ್ನು ಕಚೇರಿಗೆ ಕರೆದು ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಿಂದ ಹೋಗುವಾಗ ಮಾರ್ಗ ಮಧ್ಯೆ ಚಾಸಾ-6 ರವರು ಪಂಚರನ್ನು ನೇಮಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಂಚರಿಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಸದರಿಯವರನ್ನು ನಮ್ಮ ಜೊತೆ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಿಂದಲೇ ಪ್ರಿಂಟರ ಮತ್ತು ಲ್ಯಾಪಟಾಪ ತೆಗೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 7.00 ಗಂಟೆಗೆ ಶಿರೋಳ ಗ್ರಾಮಕ್ಕೆ ಹೋಗಿ ಕಂಪೌಂಡ ಗೋಡೆಯ ಮರೆಯಲ್ಲಿ ನಿಂತು ವೀಕ್ಷಣೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಂಜೆ 7.00 ಗಂಟೆಗೆ ಕತ್ತಲಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೀದಿ ದೀಪದ ಬೆಳಕಿನಲ್ಲಿ 1 ನೇ ಆರೋಪಿತನನ್ನು ನೋಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದೀಪದ ಬೆಳಕಿನಲ್ಲಿ ದೂರದಿಂದ ಯಾವುದೇ ವ್ಯಕ್ತಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ವೀಕ್ಷಣೆ ಮಾಡುವ ಸಮಯದಲ್ಲಿ 1 ನೇ ಆರೋಪಿತನು ಓಸಿ ಚೀಟಿ ಆಡುತ್ತಿರುವುದು ಕಂಡು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನನ್ನು ಬಂಧಿಸಿ ಅಂಗಶೋಧನೆ ಮಾಡಿದಾಗ ಮು. ಮಾ.ಗಳು ದೊರೆತಿರುತ್ತವೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ 1 ನೇ ಆರೋಪಿತ ವಿರುದ್ಧ ಯಾವುದೇ ದಾಳಿ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲ ದಾಖಲೆಗಳನ್ನು ಕಚೇರಿಯಲ್ಲಿಯೇ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಕಛೇರಿಯ ಅಂಕಿ ಅಂಶಗಳಿಗಾಗಿ ಚಾಸಾ-1 ರವರು ದಾಖಲಿಸಿರುವ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-6 ರವರು ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟುಗಳು ಎಲ್ಲ ಜನರ ಹತ್ತಿರ ದೊರೆಯುತ್ತವೆ ಎಂದರೆ ಸರಿ. ಈ ಪ್ರಕರಣಕ್ಕೂ, ಆರೋಪಿತರಿಗೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಸೂಚನೆ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನನ್ನು ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ

## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ. 690/2024**

**ಚಾಸಾಃ1/ಪ್ರಾಸಾಃ 3**

**ದಿನಾಂಕಃ 07-07-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ಶಿವಕುಮಾರ |
| ತಂದೆ/ಗಂಡನ ಹೆಸರು | ಭೀಮಪ್ಪ |
| ವಯಸ್ಸು | 36 ವರ್ಷ |
| ಉದ್ಯೋಗ | ಪೇದೆ ನಂಬರ 456 ನರಗುಂದ ಪೋಲಿಸ ಠಾಣೆ |
| ವಾಸ | ನರಗುಂದ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನಾನು ಜುಲೈ 2022 ರಿಂದ ಇಲ್ಲಿಯವರೆಗೆ ನರಗುಂದ ಪೋಲಿಸರ ಠಾಣೆಯಲ್ಲಿ ಪೇದೆ ನಂಬರ 456 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ: 20-11-2024 ರಂದು ಸಂಜೆ 5.30 ಗಂಟೆಯ ಸಮಯದಲ್ಲಿ ಕೊಣ್ಣೂರು ಹೊರಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರು ಕರೆ ಮಾಡಿ ಶಿರೋಳ ಗ್ರಾಮದ ಸರಕಾರಿ ಆಸ್ಪತ್ರೆಯ ಎದುರಿಗೆ ಇಂತಿಯಾಜ ತಂದೆ ರಾಜೇಸಾಬ ಚಳ್ಳಮರದ ಎಂಬ ವ್ಯಕ್ತಿಯು ಸಾರ್ವಜನಿಕರನ್ನು ಕರೆದು 1 ರೂ. ಗೆ 80 ರೂ. ನೀಡುತ್ತೇನೆ ಎಂದು ಜನರಿಂದ ಹಣ ಪಡೆದು ಓಸಿ ಜೂಜಾಟ ನಡೆಸುತ್ತಿರುವ ಬಗ್ಗೆ ಮತ್ತು ಸದರಿ ಓಸಿ ಹಣ ಮತ್ತು ಚೀಟಿಯನ್ನು ಹಸನ್ ಸಾಃರಾಮದುರ್ಗ ಎಂಬ ವ್ಯಕ್ತಿಗೆ ನೀಡುತ್ತಾನೆ ಎಂದು ಮಾಹಿತಿ ನೀಡಿರುತ್ತಾರೆ. ಕೂಡಲೇ ನಾನು ನರಗುಂದ ಠಾಣೆಗೆ ಬಂದು ಎಸ ಹೆಚ್ ಓ ಕರ್ತವ್ಯದಲ್ಲಿದ್ದ ಚಾಸಾ-6 ರವರಿಗೆ ಸದರಿ ಮಾಹಿತಿಯ ಕುರಿತು ದೂರು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ2(ಎ) ಎಂದು ಗುರುತಿಸಲಾಯಿತು. ಸಂಜೆ 6.30 ಗಂಟೆಯ ಸಮಯದಲ್ಲಿ ಚಾಸಾ-6 ರವರು ನನ್ನನ್ನು ಮತ್ತು ಸಿಬ್ಬಂದಿಯಾದ ಚಾಸಾ-4, 5 ರವರನ್ನು ತಮ್ಮ ಕಚೇರಿಗೆ ಕರೆದು ಪ್ರಕರಣದ ಕುರಿತು ದಾಳಿಗೆ ಹೋಗುವ ಬಗ್ಗೆ ತಿಳಿಸಿರುತ್ತಾರೆ. ಆ ಪ್ರಕಾರ ಚಾಸಾ-6 ರವರೊಂದಿಗೆ ನಾನು ಮತ್ತು ಚಾಸಾ-4, 5 ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟು ನರಗುಂದ ಪಟ್ಟಣದ ವಡ್ಡರ ಓಣಿ ಕ್ರಾಸ ಹತ್ತಿರ ನಿಂತಿದ್ದ ಚಾಸಾ-2, 3 ರವರನ್ನು ಚಾಸಾ-6 ರವರು ಪರಿಚಯ ಮಾಡಿಕೊಂಡು , ಪ್ರಕರಣದ ಮಾಹಿತಿ ತಿಳಿಸಿ, ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿರುತ್ತಾರೆ. ಅದಕ್ಕೆ ಅವರು ಒಪ್ಪಿ ಕೊಂಡಿದ್ದರಿಂದ ಅವರನ್ನೂ ಸಹ ನಮ್ಮ ಜೊತೆ ಇಲಾಖಾ ವಾಹನದಲ್ಲಿ ಕರೆದುಕೊಂಡು ಕೊಣ್ಣೂರು ಮಾರ್ಗವಾಗಿ ಶಿರೋಳ ಸರಕಾರಿ ಆಸ್ಪತ್ರೆಯ

ಮುಂದೆ ಸಂಜೆ 7.00 ಗಂಟೆಗೆ ತಲುಪಿರುತ್ತೇವೆ. ಆಸ್ಪತ್ರೆಯ ಮುಂದೆ ಇರುವ ಗಿಡದ ಮರೆಯಲ್ಲಿ ವಾಹನ ನಿಲ್ಲಿಸಿ, ನಾವು ನಿಂತುಕೊಂಡು ವಿಕ್ಷಣೆ ಮಾಡಿರುತ್ತೇವೆ. ಆ ಸಮಯದಲ್ಲಿ ಆಸ್ಪತ್ರೆಯ ಮುಂದೆ ಇರುವ ರಸ್ತೆಯ ಪಕ್ಕದಲ್ಲಿ ಒಬ್ಬ ವ್ಯಕ್ತಿಯು ಸಾರ್ವಜನಿಕರನ್ನು ಕರೆದು ಅದೃಷ್ಟ ಸಂಖ್ಯೆಗಳ ಮೇಲೆ ಹಣ ಕಟ್ಟಿರಿ, ಅದೃಷ್ಟ ಸಂಖ್ಯೆ ಬಂದರೆ 1 ರೂ. ಗೆ 80 ರೂ. ನೀಡುತ್ತೇನೆ ಎಂದು ಜನರಿಂದ ಹಣ ಪಡೆದು ಓಸಿ ಜೂಜಾಟ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಸಂಜೆ 7.10 ಗಂಟೆಯ ಸಮಯದಲ್ಲಿ ಚಾಸಾ–6 ರವರೊಂದಿಗೆ ನಾವು ಪಂಚರ ಸಮಕ್ಷಮ ದಾಳಿ ಮಾಡಿದ್ದು, ಆ ಸಮಯದಲ್ಲಿ ಸದರಿ ವ್ಯಕ್ತಿಯನ್ನು ಚಾಸಾ–6 ರವರು ಹಿಡಿದಿರುತ್ತಾರೆ. ಆತನೊಂದಿಗೆ ನಿಂತಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ನಂತರ ಚಾಸಾ–6 ರವರು ಸದರಿ ವ್ಯಕ್ತಿಯನ್ನು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಇಂತಿಯಾಜ ತಂದೆ ರಾಜೇಸಾಬ ಚಳ್ಳಮರದ ಎಂದು ಹಾಗೂ ತಾನು ಓಸಿ ಚೀಟಿ ಆಡುತ್ತಿರುವ ಬಗ್ಗೆ ತಿಳಿಸಿರುತ್ತಾನೆ. ಚಾಸಾ–6 ರವರು ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಅಂಗಶೋಧನೆ ಮಾಡಿದಾಗ ಆತನ ಪ್ಯಾಂಟನ ಬಲ ಜೇಬಿನಲ್ಲಿ ರೂ.320 ಹಣ, ಅಂಗಿ ಜೇಬಿನಲ್ಲಿ ಒಂದು ಪೆನ್ ಹಾಗೂ ಓಸಿ ನಂಬರ ಬರೆದ ಚೀಟಿ ಸಿಕ್ಕಿರುತ್ತವೆ. ಚಾಸಾ–6 ರವರು ಸದರಿ ವಸ್ತುಗಳ ಕುರಿತು ಆತನನ್ನು ವಿಚಾರಣೆ ಮಾಡಿದಾಗ ಆತ ಸದರಿ ಓಸಿ ಹಣವನ್ನು ಹಸನ್ ಎಂಬ ವ್ಯಕ್ತಿಗೆ ನೀಡುತ್ತೇನೆ ಎಂದು ತಿಳಿಸಿರುತ್ತಾನೆ. ಸದರಿ ಚಾಸಾ–2, 3 ರವರ ಸಮಕ್ಷಮ ಚಾಸಾ–6 ರವರು ಅದೇ ಸ್ಥಳದಲ್ಲಿ ಸಂಜೆ 7.10 ರಿಂದ 7.45 ಗಂಟೆಯವರೆಗೆ ನಿಪಿ–1 ರಂತೆ ಸ್ಥಳ ಪಂಚನಾಮೆ ಜರುಗಿಸಿ, ಸದರಿ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ನಂತರ ಬಂಧಿಸಿದ ವ್ಯಕ್ತಿ, ದಾಖಲೆಗಳು ಮತ್ತು ಮು. ಮಾ.ಗಳೊಂದಿಗೆ ನರಗುಂದ ಠಾಣೆಗೆ ಬಂದಿರುತ್ತೇವೆ. ದಾಳಿಯ ಸಮಯದಲ್ಲಿ ಬಂಧಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿತನಾಗಿದ್ದಾನೆ. 1 ನೇ ಆರೋಪಿತನಿಂದ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಹಣ, ಪೆನ್ ಮತ್ತು ಚೀಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು. ದಾಳಿಯ ಸಮಯದಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಚಾಸಾ–6 ರವರ ಸೂಚನೆ ಮೇರೆಗೆ ನನ್ನ ಮೊಬೈಲನಲ್ಲಿ ಫೋಟೋ ತೆಗೆದು, ಚಿತ್ರೀಕರಣ ಮಾಡಿರುತ್ತೇನೆ. ಠಾಣೆಗೆ ಬಂದ ನಂತರ ಸದರಿ ಫೋಟೋ ಮತ್ತು ವಿಡಿಯೋಗಳನ್ನು ಠಾಣಾ ಕಂಪ್ಯೂಟರ ಮೂಲಕ ಡಿವಿಡಿಗೆ ವರ್ಗಾಯಿಸಿ ಪ್ರಮಾಣ ಪತ್ರದೊಂದಿಗೆ ಚಾಸಾ–6 ರವರಿಗೆ ನೀಡಿರುತ್ತೇನೆ. ಪ್ರಮಾಣ ಪತ್ರವನ್ನು ನಿಪಿ–3 ಎಂದು, ಡಿವಿಡಿಯನ್ನು ನಿಪಿ–4 ಎಂದು,ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಈ ಎಲ್ಲ ವಿಷಯಗಳ ಕುರಿತು ಚಾಸಾ–6 ರವರ ಮುಂದೆ ಹೇಳಿಕೆ ನೀಡಿರುತ್ತೇನೆ .

**ಪಾಟೀ ಸವಾಲುಃ ಶ್ರೀ ಕೆ ಎಸ ಡಿ ಆರೋಪಿತರ ಪರ ವಕೀಲರಿಂದಃ**

ಚಾಸಾ–6 ನನ್ನ ಮೇಲಾಧಿಕಾರಿ ಎಂದರೆ ಸರಿ. ಸದರಿಯವರು ಹೇಳಿದಂತೆ ನಡೆದುಕೊಳ್ಳುತ್ತೇವೆ ಎಂದರೆ ಸರಿ. ದಿಃ 20–011–2024 ರಂದು ಸಂಜೆ 5.30 ಗಂಟೆಗೆ 1 ನೇ ಆರೋಪಿತನ ಕುರಿತು ಮಾಹಿತಿ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಾಹಿತಿಯ ಪ್ರಕಾರ ನರಗುಂದ ಠಾಣೆಗೆ ಬಂದು ದೂರು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರ್ಗ ಮದ್ಯೆ ಚಾಸಾ–6 ರವರು ಪಂಚರನ್ನು ನೇಮಿಸಿಕೊಂಡು ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕುರಿತು

ಸಂಜೆ 6.30 ಗಂಟೆಗೆ ಠಾಣೆಯಿಂದ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಮುಂದೆ ಗಿಡದ ಮರೆಯಲ್ಲಿ ವಾಹನ ನಿಲ್ಲಿಸಿ ವೀಕ್ಷಣೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ-6 ರವರು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಮುದ್ದೆ ಮಾಲುಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರುಹೇಳಿಕೆಯಲ್ಲಿ ಅಶೋಕ ಎಂಬ ವ್ಯಕ್ತಿಯ ಬಗ್ಗೆ ನಮೂದಿಸಿದ್ದು ಆತ ಯಾರು ಎಂದು ಕೇಳಲು ಸಾಕ್ಷಿಯು ತಪ್ಪಾಗಿ ಟೈಪ ಆಗಿರಬಹುದು ಎಂದು ನುಡಿಯುತ್ತಾರೆ. ಅಶೋಕ ಎಂಬ ವ್ಯಕ್ತಿ ಈ ಪ್ರಕರಣದಲ್ಲಿ ಯಾವುದೇ ಪಾತ್ರ ಹೊಂದಿರುವುದಿಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಹಾಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಅಪರಾಧವಾಗದೆ ಇದ್ದರೂ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2, 3 ರವರು ಇಲಾಖೆಯಿಂದ ದಾಖಲಿಸುವ ಹಲವು ಪ್ರಕರಣಗಳಲ್ಲಿ ಪಂಚರಾಗಿದ್ದಾರೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ನರಗುಂದದಿಂದ ಸದರಿ ಪಂಚರನ್ನು ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಕಛೇರಿಯ ಅಂಕಿ ಅಂಶಗಳಿಗಾಗಿ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತನಿಗೆ ತೊಂದರೆ ನೀಡುವ ಉದ್ದೇಶದಿಂದ ಪ್ರಕರಣದಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನೋಟುಗಳು ಎಲ್ಲ ಸ್ಥಳಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ಸದರಿ ಮು. ಮಾ.ಗಳನ್ನು ದಾಳಿಯ ಸಮಯದಲ್ಲಿ 1 ನೇ ಆರೋಪಿತನಿಂದ ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನನ್ನು ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ